ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೩

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ಮೂರನೇ ಅಧಿವೇಶನ

## ಗುರುವಾರ, ದಿನಾಂಕ: ೧೮ನೇ ಜುಲೈ, ೨೦೨೪

---

### ಸಮೂಹ – IV

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

### ರಾಜ್ಯ ಸರ್ಕಾರದ ಆಡಳಿತ ಇಲಾಖೆಗಳಲ್ಲಿರುವ ಆಸ್ತಿ ನಗದೀಕರಣದ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) –**

೩೧ (೪೧೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರ ೨೦೨೩ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ ಐದು ಗ್ಯಾರಂಟಿಗಳು ಯಾವುದು; ಮತ್ತು ಈ ಗ್ಯಾರಂಟಿಗಳನ್ನು ಯಾವ ಇಲಾಖೆಗಳ ಮುಖೇನ ಅನುಷ್ಠಾನಗೊಳಿಸಲಾಗುತ್ತಿದೆ; (ಪೂರ್ಣ ವಿವರ ನೀಡುವುದು)

(ಆ) ಈ ಐದು ಗ್ಯಾರಂಟಿಗಳ ಅನುಷ್ಠಾನಕ್ಕೆ ೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅನುದಾನವೆಷ್ಟು;

ಮತ್ತು ಈ ಸಾಲುಗಳಲ್ಲಿ ಈ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಇದುವರೆಗಿನ ಖರ್ಚು–ವೆಚ್ಚವೆಷ್ಟು (ವರ್ಷವಾರು ಮತ್ತು ಯೋಜನಾವಾರು ಪೂರ್ಣ ಮಾಹಿತಿ ನೀಡುವುದು)

(ಇ) ಸರ್ಕಾರವು ೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಗಳಿಗೆ ಮೀಸಲು ಇರಿಸಿದ ಅನುದಾನವೆಷ್ಟು ಮತ್ತು ಈ ವರ್ಷಗಳಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು ಹಾಗೂ ವೆಚ್ಚವಾದ ಮೊತ್ತವೆಷ್ಟು (ಇಲಾಖಾವಾರು ಮತ್ತು ವರ್ಷವಾರು ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ೫ ಗ್ಯಾರಂಟಿಗಳ ಅನುಷ್ಠಾನದಿಂದ ರಾಜ್ಯ ಬೊಕ್ಕಸ ಖಾಲಿಯಾಗಿರುವ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರ ಆಡಳಿತ ಇಲಾಖೆಗಳು ಮತ್ತು ಈ ಇಲಾಖೆಗಳ ಅಡಿ ಇರುವ ನಿಗಮ ಪ್ರಾಧಿಕಾರ ಮತ್ತು ಮಂಡಳಿಗಳ ಆಸ್ತಿಗಳ ಸಮಗ್ರ ಪಟ್ಟಿಯನ್ನು ಸಿದ್ಧಪಡಿಸಲು ಮತ್ತು ಬಂಡವಾಳ ಹಿಂತೆಗೆಯಲು ಹಾಗೂ ಈ ಆಸ್ತಿಗಳನ್ನು ನಗದೀಕರಿಸಲು ಅಥವಾ ಮರುಬಳಕೆ ಮಾಡಲು ಕ್ರಮ ಕೈಗೊಂಡಿರುವುದು ನಿಜವೇ;

(ಉ) ಹಾಗಿದ್ದಲ್ಲಿ, ಆಸ್ತಿ ನಗದೀಕರಣ ಎಷ್ಟು; ಬಂಡವಾಳ ಹಿಂತೆಗೆಯುವಿಕೆ ಯೋಜನೆಯನ್ನು ರೂಪಿಸಲು ರಾಜ್ಯ ಸರ್ಕಾರ ಗೊತ್ತುಪಡಿಸಿರುವ ಇಲಾಖೆ ಅಥವಾ ಸಂಸ್ಥೆಗಳು ಯಾವುವು; ಇವುಗಳನ್ನು ಯಾವ ಆಧಾರ ಮತ್ತು ಮಾನದಂಡ ಆಧರಿಸಿ ನೇಮಕ ಮಾಡಲಾಗಿದೆ; ಹಾಗೂ ಇವುಗಳು ಇದುವರೆಗೂ ಕೈಗೊಂಡಿರುವ ಅಧ್ಯಯನ ಅಥವಾ ಮೌಲ್ಯಮಾಪನಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು)

## ಕೊಡಗು ಜಿಲ್ಲೆಯ ಪ್ರವಾಸೋದ್ಯಮವನ್ನು ಉತ್ತೇಜಿಸುವ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨ (೩೩೧) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೊಡಗು ಜಿಲ್ಲೆಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ೨೦೧೯ ರಿಂದ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಮತ್ತು ಬಾಕಿ ಉಳಿದಿರುವ ಅನುದಾನ ಎಷ್ಟು; ಕೈಗೊಂಡ ಅಭಿವೃದ್ಧಿ ಯೋಜನೆಗಳಾವುವು; (ವಿವರವನ್ನು ತಾಲ್ಲೂಕುವಾರು ನೀಡುವುದು)

(ಆ) ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ವಿಫುಲ ಅವಕಾಶಗಳಿದ್ದು, ಯಾವುದಾದರೂ ಹೊಸ ಯೋಜನೆಯನ್ನು ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಹೊಸ ಯೋಜನೆಗಳನ್ನು ಕೈಗೊಂಡು ಸ್ಥಳೀಯರಿಗೆ ಜೀವನ ನಿರ್ವಹಣೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಸರ್ಕಾರ ಮುಂದಾಗುವುದೇ?

## ಕಂಬಳ ಕ್ರೀಡೆಯ ಸಂಘಟಕರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು)** –

೩೩ (೩೩೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಳುನಾಡಿನ ಪ್ರಸಿದ್ಧ ಜಾನಪದ ಕ್ರೀಡೆ "ಕಂಬಳ"ದ ಸಂಘಟಕರಿಗೆ ಪೂರ್ಣ ಅನುದಾನವನ್ನು ಇದುವರೆಗೆ ಬಿಡುಗಡೆ ಮಾಡದಿರುವುದರಿಂದ ಅನುದಾನದ ನಿರೀಕ್ಷೆಯಲ್ಲಿರುವ ಸಂಘಟಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ೨೦೨೩–೨೪ನೇ ಆರ್ಥಿಕ ವರ್ಷದಲ್ಲಿ "ಕಂಬಳ"ದ ಸಂಘಟಕರಿಗೆ ಎಷ್ಟು ಮೊತ್ತದ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ;

(ಇ) "ಕಂಬಳ"ದ ಸಂಘಟಕರಿಗೆ ಪೂರ್ಣ ಅನುದಾನವನ್ನು ಇದುವರೆಗೂ ಒದಗಿಸದಿರಲು ಕಾರಣಗಳೇನು;

(ಈ) ಯಾವ ಕಾಲಮಿತಿಯೊಳಗೆ "ಕಂಬಳ"ದ ಸಂಘಟಕರಿಗೆ ಸರ್ಕಾರ ಪೂರ್ಣ ಹಾಗೂ ಅವಶ್ಯಕ ಅನುದಾನವನ್ನು ಬಿಡುಗಡೆಗೊಳಿಸುವುದು?

## ಹಿಂದಿನ ಸರ್ಕಾರದ ಅವಧಿಯಲ್ಲಿ ಯಾವ ಯಾವ ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಕುರಿತು

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)** –

೩೪ (೨೮೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಿಂದಿನ ಸರ್ಕಾರದ ಅವಧಿಯಲ್ಲಿ ಯಾವ ಯಾವ ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ದರವನ್ನು ಏರಿಕೆ ಮಾಡಲಾಗಿದೆ; (ವಿವರ ಒದಗಿಸುವುದು)

(ಆ) ಹೊರರಾಜ್ಯಗಳು ಮತ್ತು ನಮ್ಮ ರಾಜ್ಯದಲ್ಲಿನ ಪೆಟ್ರೋಲ್ ಮತ್ತು ಡೀಸೆಲ್ ದರಗಳಲ್ಲಿರುವ ವ್ಯತ್ಯಾಸಗಳೇನು;

(ಇ) ಪ್ರಸ್ತುತ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ದರ ಏರಿಕೆಯೂ ರಾಜ್ಯದ ವರಮಾನ ವೃದ್ಧಿಗೆ ಕಾರಣವಾಗುವುದೇ?

## ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನೇಮಕಾತಿ ಪ್ರಕ್ರಿಯೆ ವಿಳಂಬ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೩೫ (೨೯೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಲೋಕಸೇವಾ ಆಯೋಗ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಪ್ರಕಟಿಸಿರುವ ಅಧಿಸೂಚನೆಗಳೆಷ್ಟು; (ಅಧಿಸೂಚನೆ ಪ್ರಕಟಿಸಿದ ದಿನಾಂಕದ ಸಹಿತ ಅಧಿಸೂಚನೆವಾರು ಹುದ್ದೆಗಳ ವಿವರ ನೀಡುವುದು)

(ಆ) ಅಧಿಸೂಚನೆಯಲ್ಲಿ ಪ್ರಸ್ತಾಪಿತ ಹುದ್ದೆಗಳಿಗೆ ಅರ್ಜಿಗಳ ಸ್ವೀಕೃತಿ ಪೂರ್ಣಗೊಂಡು ಲಿಖಿತ ಪರೀಕ್ಷೆ ಆಗಿ ಮೌಖಿಕ ಸಂದರ್ಶನ ನಡೆದಿವೆಯೇ; ಲಿಖಿತ ಪರೀಕ್ಷೆ ಪೂರ್ಣಗೊಂಡು ಮೌಖಿಕ ಸಂದರ್ಶನಕ್ಕೆ ಬಾಕಿ ಇರುವ ಮತ್ತು ಲಿಖಿತ ಪರೀಕ್ಷೆ ಇನ್ನೂ ನಡೆಯದ ಹುದ್ದೆಗಳ ವಿವರ ನೀಡುವುದು;

(ಇ) ಕೆ.ಪಿ.ಎಸ್.ಸಿ ಯಲ್ಲಿ ನೇಮಕ ಪ್ರಕ್ರಿಯೆ ತ್ವರಿತಗತಿಯಲ್ಲಿ ನಡೆಯದ ಕುರಿತು ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನೇಮಕಾತಿ ಪ್ರಕ್ರಿಯೆ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಕೆ.ಪಿ.ಎಸ್.ಸಿ ಕಛೇರಿಯಲ್ಲಿ ಆಯ್ಕೆ ಪಟ್ಟಿ ನಾಪತ್ತೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಉ) ಕಡತ ನಾಪತ್ತೆ ಕುರಿತು ದೂರು ದಾಖಲಾಗಿದೆಯೇ; ಕಡತ ನಾಪತ್ತೆಯಿಂದಾಗಿ ಆಯ್ಕೆಯಾಗಿದ್ದ ಅಭ್ಯರ್ಥಿಗಳ ಭವಿಷ್ಯದ ಕುರಿತು ಸರ್ಕಾರ ಚಿಂತಿಸಿದೆಯೇ; ಈ ವಿಚಾರದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

## ನವಲಿ ಸಮಾನಾಂತರ ಜಲಾಶಯುವನ್ನು ನಿರ್ಮಿಸುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೬ (೩೨೬) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನವಲಿ ಸಮಾನಾಂತರ ಜಲಾಶಯವನ್ನು ನಿರ್ಮಿಸಲು ಡಿ.ಪಿ.ಆರ್ ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವಾಗ ತಯಾರಿಸಲಾಗಿದೆ; ಅದನ್ನು ಸರ್ಕಾರ ಒಪ್ಪಿದೆಯೇ; (ಪ್ರತಿಯನ್ನು ಒದಗಿಸುವುದು)

(ಆ) ಈ ಜಲಾಶಯ ನಿರ್ಮಾಣಕ್ಕೆ ಮೀಸಲಿಟ್ಟ ಅನುದಾನ ಎಷ್ಟು; ಇದರ ಟೆಂಡರ್ ಪ್ರಕ್ರಿಯೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು: (ಮಾಹಿತಿ ಒದಗಿಸುವುದು)

(ಇ) ಈ ನವಲಿ ಸಮಾನಾಂತರ ಜಲಾಶಯದ ನಿರ್ಮಾಣದಿಂದ ಮುಳುಗಡೆಯಾಗುವ ಭೂಮಿ ಎಷ್ಟು; ಇದಕ್ಕೆ ಖರ್ಚಾಗುವ ಹಣ ಎಷ್ಟು; ಈ ಜಲಾಶಯದಲ್ಲಿ ಸಿಗುವ ಒಟ್ಟು ನೀರೆಷ್ಟು? (ವಿವರಗಳೊಂದಿಗೆ ಮಾಹಿತಿ ನೀಡುವುದು)

## ಕಾಲೇಜು ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗುತ್ತಿರುವ ಬಗ್ಗೆ

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) –**

೩೭ (೩೩೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾಲೇಜು ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ದಾಖಲಾಗಿರುವ ಪ್ರಕರಣಗಳೆಷ್ಟು ಮತ್ತು ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಆಗಿದೆ; (ಸಂಪೂರ್ಣ ವಿವರ ನೀಡುವುದು)

(ಆ) ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳು ಹೇಗೆ ದೊರೆಯುತ್ತದೆ ಹಾಗೂ ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ವಿದ್ಯಾರ್ಥಿಗಳು ಮಾದಕ ವ್ಯಸನದಿಂದ ದೂರವಿರಲು ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿದೆ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಸನ ಮುಕ್ತ ಪುನರ್ ವಸತಿ ಕೇಂದ್ರಗಳು ಎಷ್ಟು; ಮತ್ತು ಹೇಗೆ ಕಾರ್ಯನಿರ್ವಹಿಸುತ್ತಿವೆ? (ಸಂಪೂರ್ಣ ವಿವರ ನೀಡುವುದು)

## ಜಾರಿ ವಿಭಾಗದ ಅಧಿಕಾರಿಗಳು ನಾನ್ ಫೈಲರ್ಸ್‌ಗಳಿಂದ ವಸೂಲಿ ಮಾಡಿದ ತೆರಿಗೆಗಳ ಸಂಗ್ರಹಣದ ಕ್ರಮದ ಬಗ್ಗೆ

**ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೩೮ (೩೪೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) CTD ಯ ಎಲ್ಲಾ ಜಾರಿ ವಿಭಾಗಗಳಿಂದ ೨೦೨೨–೨೩ ಮತ್ತು ೨೦೨೩–೨೪ಕ್ಕೆ (ಜೂನ್ ೩೦ ರವರೆಗೆ) ಸಂಗ್ರಹಿಸಿದ ಒಟ್ಟು ಆದಾಯದ ಮೊತ್ತ ಎಷ್ಟು;

(ಆ) ಸಂಗ್ರಹಣೆಯಿಂದ ಪತ್ತೆಯಾದ ಮತ್ತು ಸಂಗ್ರಹಿಸಲಾದ 'ವಂಚಿಸಿದ ತೆರಿಗೆ' ಮೊತ್ತ ಎಷ್ಟು; ಮತ್ತು ವಿತರಕರು ಸಲ್ಲಿಸಿದ ಮಾಸಿಕ ರಿಟರ್ನ್ಸ್‌ಗೆ (GSTR-3B ) ಸಂಬಂಧಿಸಿದ ಮೊತ್ತ ಎಷ್ಟು;

(ಇ) ಜಾರಿ ವಿಭಾಗದ ಅಧಿಕಾರಿಗಳಿಂದ ನಾನ್ ಫೈಲರ್ಸ್‌ಗಳಿಂದ ತೆರಿಗೆ (GSTR-3B) ವಸೂಲು ಮಾಡಿದ ಸಂಬಂಧಪಟ್ಟ ವ್ಯಾಪ್ತಿಯ ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು;

(ಈ) ಜಾರಿ ಅಧಿಕಾರಿಗಳು ನಾನ್ ಫೈಲರ್ಸ್ ಗಳಿಂದ ತೆರಿಗೆ ಸಂಗ್ರಹಿಸಿರುವ ಪ್ರಕರಣದಲ್ಲಿ ಸಂಬಂಧಪಟ್ಟ ವ್ಯಾಪ್ತಿಯ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

## ಕೃಷ್ಣ ಮೇಲ್ದಂಡೆ ಯೋಜನೆಯ ೩ನೇ ಹಂತದ ಪ್ರಕ್ರಿಯೆ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೩೯ (೩೫೧) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ೩ನೇ ಹಂತದ ಭೂ–ಸ್ವಾಧೀನ (ಎಫ್‌ಆರ್‌ಎಲ್–೫೨೪.೨೫೬) ಪ್ರಕ್ರಿಯೆ ಯಾವ ಹಂತದಲ್ಲಿದೆ; ಈ ಭೂ ಸ್ವಾಧೀನಕ್ಕೆ ಒಳಪಡುವ ಕ್ಷೇತ್ರ ಎಷ್ಟು; ಈಗಾಗಲೇ ಭೂ ಸ್ವಾಧೀನ ಪಡಿಸಿಕೊಂಡಿರುವ ಕ್ಷೇತ್ರಕ್ಕೆ ಎಕರೆಗೆ ಎಷ್ಟು ಭೂ–ಪರಿಹಾರವನ್ನು ಸಂತ್ರಸ್ಥರಿಗೆ ನೀಡಲಾಗಿದೆ; ನೀಡಬೇಕಾದ ಭೂ–ಪರಿಹಾರ ಒಟ್ಟು ಕ್ಷೇತ್ರ ಮತ್ತು ಮೊತ್ತ ಎಷ್ಟು; ಬಾಕಿ ಉಳಿಸಿಕೊಂಡಿರುವ ಭೂ–ಪರಿಹಾರವನ್ನು ಸಂತ್ರಸ್ಥರಿಗೆ ಯಾವ ಕಾಲಮಿತಿಯೊಳಗೆ ನೀಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ೩ನೇ ಹಂತದ ಭೂ–ಸ್ವಾಧೀನ ಪ್ರಕ್ರಿಯೆಯನ್ನು ಎರಡು ಭಾಗಗಳಾಗಿ ವಿಂಗಡನೆ ಮಾಡಿ ಅಂದರೆ ೫೧೯.೬೦ ದಿಂದ ೫೨೨ ಮೀ.ಗೆ ಮತ್ತು ೫೨೨ ದಿಂದ ೫೨೪.೨೫೬ ಮೀ.ಗೆ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿರುವುದು ನಿಜವೇ; ಇದ್ದಲ್ಲಿ, ೨ ಹಂತದಲ್ಲಿ ಸ್ವಾಧೀನ ಪಡಿಸಿಕೊಳ್ಳುವ ಕುರಿತು ಸರ್ಕಾರದಿಂದ ಯಾವುದಾದರೂ ಆದೇಶವಿದ್ದಲ್ಲಿ, ಅದರ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು;

(ಇ) ಹಂತ ಹಂತವಾಗಿ ಭೂ–ಸ್ವಾಧೀನ ಪಡಿಸಿಕೊಳ್ಳುವುದರಿಂದ ಆ ಭಾಗದ ಸಂತ್ರಸ್ಥ ರೈತರಿಗೆ ತೊಂದರೆ ಮತ್ತು ಭೂ–ಸ್ವಾಧೀನ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗುವುದಿಲ್ಲವೇ; ಈ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು)

(ಈ) ಏಕಕಾಲದಲ್ಲಿ ಭೂ–ಸ್ವಾಧೀನ ಪಡಿಸಿಕೊಂಡು ಪರಿಹಾರ ಧನವನ್ನು ವಿತರಿಸಬೇಕೆನ್ನುವುದು ಆ ಭಾಗದ ಸಂತ್ರಸ್ಥ ರೈತರ ಬೇಡಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

## ಉದ್ಯಾನವನ ನಿರ್ಮಾಣದ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦ (೩೬೮) ಉಪಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನಲ್ಲಿ ಸಾರ್ವಜನಿಕ ವಾಹನಗಳ ಹೆಚ್ಚಳ ಹಾಗೂ ಇತರೆ ಕಾರಣಗಳಿಂದ ಪರಿಸರ ಮಾಲಿನ್ಯ ಹೆಚ್ಚಾಗಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ಕಳೆದ ೭೫ ವರ್ಷಗಳಿಂದ ಆಡಳಿತ ನಡೆಸಿರುವ ಸರ್ಕಾರಗಳು ಬ್ರಿಟಿಷ್ ಕಾಲದ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಮಾದರಿಯ ಬೃಹತ್ ಪಾರ್ಕ್‌ಗಳನ್ನು ನಗರದ ನಾಲ್ಕು ದಿಕ್ಕುಗಳಲ್ಲಿ ನಿರ್ಮಿಸಲು ವಿಫಲವಾಗಿರುವುದು ಸಹ ಪರಿಸರ ಮಾಲಿನ್ಯಕ್ಕೆ ಕಾರಣವಲ್ಲವೇ;

(ಇ) ಈ ಹಿಂದಿನ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಗಳು ಬೆಂಗಳೂರಿನ ಬೃಹತ್ ಪಾರ್ಕ್‌ಗಳನ್ನು ನಗರದ ನಾಲ್ಕೂ ದಿಕ್ಕುಗಳಲ್ಲೂ ಸಹ ನಿರ್ಮಿಸಿ ಪರಿಸರ ಮಾಲಿನ್ಯ ಕಡಿಮೆಗೊಳಿಸುವ ಜೊತೆಗೆ ನಗರದ ಹೊರವಲಯದ ಕೋಟ್ಯಾಂತರ ಜನರಿಗೆ ಉತ್ತಮ ಗಾಳಿ ದೊರೆಯುವಂತೆ ಮಾಡುವ ಯೋಜನೆ ರೂಪಿಸಿದ್ದು ನಿಜವೇ; (ಪೂರ್ಣ ಮಾಹಿತಿ ಒದಗಿಸುವುದು)

(ಈ) ಕೇವಲ ಹೊಸ ಬಡಾವಣೆಗಳನ್ನು ಮಾತ್ರ ನಿರ್ಮಿಸಿ ಹಣ ಹೆಚ್ಚುವರಿಗೆ ಮಾತ್ರ ಒತ್ತು ನೀಡುತ್ತಿರುವ ಸರ್ಕಾರ ಕೂಡಲೇ ಬೆಂಗಳೂರಿನ ನಾಲ್ಕು–ದಿಕ್ಕುಗಳಲ್ಲೂ ಸಹ ಬೃಹತ್ ಪಾರ್ಕ್‌ಗಳನ್ನು ನಿರ್ಮಿಸಲು ಕೈಗೊಳ್ಳುವ ಕ್ರಮಗಳಾವುವು?

## ಮದ್ಯದಂಗಡಿಗಳಿಗೆ ಪರವಾನಗಿ ನೀಡುವ ಕುರಿತು

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧ (೩೪೦) ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ವಿಧದ ಮದ್ಯದಂಗಡಿಗಳಿಗೆ ಪರವಾನಗಿಯನ್ನು ನೀಡಲಾಗುತ್ತಿದೆ; ಇಲಾಖಾ ಮಾರ್ಗಸೂಚಿ ಹಾಗೂ ಮಂಜೂರಾತಿಗೆ ಬೇಕಾದ ದಾಖಲೆಗಳ ಅನ್ವಯ ಎಲ್ಲಾ ದಾಖಲೆಗಳು ಸರಿಯಾಗಿದ್ದು, ಪರವಾನಗಿಯನ್ನು ನೀಡಲು ಸರ್ಕಾರವು ತೆಗೆದುಕೊಳ್ಳುವ ಸಮಯವೇನು; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ೨೦೨೧ರವರೆಗೂ ರಾಜ್ಯದಲ್ಲಿ ಸಿಎಲ್–೨, ಸಿಎಲ್–೯ ಹಾಗೂ ಸಿಎಲ್–೭ ಸನ್ನದುಗಳು ಸರ್ಕಾರದಿಂದ ಎಷ್ಟು ಮಂಜೂರಾಗಿದೆ; (ವರ್ಷವಾರು, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ೨೦೨೧ ರಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಸಿಎಲ್–೨ ಹಾಗೂ ಸಿಎಲ್–೯ ಸನ್ನದುಗಳು ಸರ್ಕಾರದಿಂದ ಎಷ್ಟು ಮಂಜೂರಾಗಿದೆ; (ವರ್ಷವಾರು, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ೨೦೨೧ ರಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಸಿಎಲ್–೭ ಸನ್ನದುಗಳು ಸರ್ಕಾರದಿಂದ ಎಷ್ಟು ಮಂಜೂರಾಗಿದೆ; (ವರ್ಷವಾರು, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ಈ ಮದ್ಯದಂಗಡಿಗಳಿಗೆ ಪರವಾನಿಗೆ ನೀಡುವ ಸಂಬಂಧ ಭ್ರಷ್ಟಾಚಾರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಭ್ರಷ್ಟಾಚಾರ ಮಾಡುತ್ತಿರುವವರ ವಿರುದ್ಧ ಯಾವ ಕಠಿಣ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)

## ಕಳೆದ ೩ ವರ್ಷಗಳಿಂದ ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೪೨ (೩೩೮) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ೩ ವರ್ಷಗಳಿಂದ ಯಾವ ಯಾವ ರೀತಿಯ ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಇವೆ; (ಅಂಕಿ–ಅಂಶಗಳ ವಿವರ ಒದಗಿಸುವುದು)

(ಆ) ಸದರಿ ನ್ಯಾಯಾಲಯಗಳಿಂದ ಯಾವ ಯಾವ ರೀತಿಯ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ; (ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಅಂಕಿ–ಅಂಶಗಳನ್ನು ಒದಗಿಸುವುದು)

(ಇ) ಸದರಿ ಪ್ರಕರಣಗಳನ್ನು ಯಾವ ಕಾಲಮಿತಿಯಲ್ಲಿ ಇತ್ಯರ್ಥಪಡಿಸಲಾಗುವುದು; ಅಗತ್ಯವಿರುವ ಕಾನೂನುಗಳನ್ನು ರಚಿಸಲು ಇರುವ ತೊಡಕುಗಳೇನು; ಇವುಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

**ಕೆ.ಆರ್.ಎಸ್. ಗೇಟ್‌ಗಳ ಆಧುನೀಕರಣ ಕಾಮಗಾರಿ ಕುರಿತು**

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೪೩ (೩೪೪) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆ, ಕೃಷ್ಣರಾಜಸಾಗರ ಜಲಾಶಯ (ಅಣೆಕಟ್ಟು)ಕ್ಕೆ ಅಳವಡಿಸಲಾಗಿರುವ ಗೇಟುಗಳ ಒಟ್ಟು ಸಂಖ್ಯೆ ಎಷ್ಟು; ಯಾವ ಯಾವ ಹಂತದ ಅಡಿ ನೀರಿಗೆ ಎಷ್ಟು ಗೇಟ್‌ಗಳನ್ನು ಅಳವಡಿಸಲಾಗಿದೆ;

(ಆ) ಜಲಾಶಯದ ನಿರ್ಮಾಣದ ನಂತರ ಗೇಟುಗಳ ಆಧುನೀಕರಣ ಕಾಮಗಾರಿ ನಡೆದಿದೆಯೇ; ಅಥವಾ ದುರಸ್ತಿ ಕಾರ್ಯಗಳಿಗಷ್ಟೇ ಸೀಮಿತವಾಗಿತ್ತೆ; (ಸಂಪೂರ್ಣ ವಿವರ ನೀಡುವುದು)

(ಇ) ಜಲಾಶಯಕ್ಕೆ ಅಳವಡಿಸಲಾಗಿರುವ ಗೇಟುಗಳ ಅವಧಿ ಎಷ್ಟು; ಒಟ್ಟು ಎಷ್ಟು ಗೇಟುಗಳನ್ನು ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ; ಈವರೆವಿಗೂ ಎಷ್ಟು ಗೇಟುಗಳನ್ನು ಯಾವ ಯಾವ ವರ್ಷದಲ್ಲಿ ಆಧುನೀಕರಣಗೊಳಿಸಲಾಗಿದೆ; ಹಾಗೂ ಇದಕ್ಕೆ ಭರಿಸಲಾದ ಹಣಕಾಸಿನ ವೆಚ್ಚ ಎಷ್ಟು; (ಸಂಪೂರ್ಣ ವಿವರ ನೀಡುವುದು)

(ಈ) ಇನ್ನೂ ಎಷ್ಟು ಗೇಟುಗಳನ್ನು ಆಧುನೀಕರಣ ಮಾಡಬೇಕಿದೆ; ಇದಕ್ಕೆ ಅಗತ್ಯವಿರುವ ಅನುದಾನ ಎಷ್ಟು; ಗೇಟುಗಳ ಆಧುನೀಕರಣದಿಂದ ತಡೆಯಬಹುದಾದ ನೀರಿನ ಸೋರಿಕೆ ಪ್ರಮಾಣ ಎಷ್ಟು;

(ಉ) ಜಲಾಶಯದ ಗೇಟುಗಳ ಆಧುನೀಕರಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು;

(ಊ) ತಾಂತ್ರಿಕ ಕಾರಣಕ್ಕೆ ಮುಚ್ಚಲಾಗಿರುವ ಗೇಟುಗಳ ಸಂಖ್ಯೆ ಎಷ್ಟು; ಅವು ಯಾವುವು; ಮತ್ತು ಯಾವ ವರ್ಷದಿಂದ ಮುಚ್ಚಲಾಗಿದೆ? (ವಿವರ ನೀಡುವುದು)

## ರಾಜ್ಯ ಸರ್ಕಾರಿ ನೌಕರರಿಗೆ ೭ನೇ ವೇತನ ಆಯೋಗ ಜಾರಿ ಮಾಡುವ ಕುರಿತು

ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –

ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –

ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –

ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನಸಭೆಯಿಂದ ಚುನಾಯಿತರಾದವರು) –

೪೪ (೩೫೬+೩೫೭+೨೯೪+೪೦೯+೨೭೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರಿ ನೌಕರರಿಗೆ ೭ನೇ ಪರಿಷ್ಕೃತ ವೇತನ ಶ್ರೇಣಿಗಳನ್ನು ನೀಡುವ ಕುರಿತು ಸರ್ಕಾರ ಯಾವ ದಿನಾಂಕ/ವರ್ಷದಂದು ವೇತನ ಆಯೋಗವನ್ನು ರಚನೆ ಮಾಡಿದೆ ಮತ್ತು ವರದಿಯನ್ನು ಸಲ್ಲಿಸಲು ನಿಗದಿಪಡಿಸಿದ ಅವಧಿ ಎಷ್ಟು; (ಮಾಹಿತಿ ನೀಡುವುದು)

(ಆ) ರಾಜ್ಯ ಸರ್ಕಾರಿ ನೌಕರರ ಸಂಘ ಏಳನೇ ವೇತನ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಲು ಮತ್ತು ಇನ್ನುಳಿದ ಎರಡು ಬೇಡಿಕೆಗಳನ್ನು ಇದೇ ಜುಲೈ ಕೊನೆಯ ವಾರದ ಒಳಗಾಗಿ ಈಡೇರಿಸದಿದ್ದಲ್ಲಿ ಆಗಸ್ಟ್ ತಿಂಗಳಿನಿಂದ ಕೆಲಸಕ್ಕೆ ಗೈರು ಹಾಜರಾಗುವ ಮೂಲಕ ಅಸಹಕಾರಿ ಚಳುವಳಿ ಆರಂಭಿಸುವ ಬಗ್ಗೆ ನಿರ್ಣಯ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಏಳನೇ ವೇತನ ಆಯೋಗದ ಶಿಫಾರಸ್ಸು ಜಾರಿ ಮಾಡಲು ಮತ್ತು ಇನ್ನುಳಿದ ಎರಡು ಬೇಡಿಕೆಗಳಾದ ಎನ್.ಪಿ.ಎಸ್. ರದ್ದುಪಡಿಸಿ ಓ.ಪಿ.ಎಸ್. ಜಾರಿ ಹಾಗೂ ನೌಕರರ ಕುಟುಂಬಕ್ಕೆ ಉಚಿತ ಆರೋಗ್ಯ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಯಾವ ರೀತಿಯ ನಿರ್ಧಾರ ಕೈಗೊಂಡಿದೆ; (ವಿವರವಾದ ಮಾಹಿತಿ ನೀಡುವುದು)

(ಈ) ಸರ್ಕಾರಕ್ಕೆ ವರದಿ ಸಲ್ಲಿಸುವ ಹಂತದಲ್ಲಿರುವ ಆಯೋಗದ ಅವಧಿಯನ್ನು ಎಷ್ಟು ಬಾರಿ ಮುಂದೂಡಲಾಗಿದೆ; ಇದಕ್ಕೆ ಬೇಕಾಗುವ ಹಣ ಎಷ್ಟು; ವೇತನ ಆಯೋಗದ ವರದಿಯನ್ನು ಯಾವಾಗ ಜಾರಿಗೊಳಿಸಲಾಗುವುದು; ಯಾವ ದಿನಾಂಕದಿಂದ ನೌಕರರಿಗೆ ಆರ್ಥಿಕ ಸೌಲಭ್ಯ ಕಲ್ಪಿಸಲಾಗುವುದು? (ಸಂಪೂರ್ಣ ಮಾಹಿತಿಯನ್ನು ನೀಡುವುದು)

**ರಾಜ್ಯದಲ್ಲಿ ಹೆಚ್ಚುತ್ತಿರುವ ಆನ್‌ಲೈನ್ ವಂಚನೆ ಪ್ರಕರಣಗಳ ಬಗ್ಗೆ**

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೪೫ (೪೦೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ಆನ್‌ಲೈನ್ ಉದ್ಯೋಗ, ನಕಲಿ ಲೋನ್ ಆ್ಯಪ್ ಸೇರಿದಂತೆ ವಿದೇಶಿ ಕಂಪನಿಗಳ ಹೆಸರಿನಲ್ಲಿ ವಂಚನೆ ಮಾಡಿರುವ ಪ್ರಕರಣಗಳು ಎಷ್ಟು; ಇಲ್ಲಿಯವರೆಗೆ ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗಿದೆ;

(ಆ) ದೇಶದಾದ್ಯಂತ ದಾಖಲಾದ ಆನ್‌ಲೈನ್ ವಂಚನೆ ಪ್ರಕರಣಗಳಲ್ಲಿ ಶೇ.೭೩%ಕ್ಕೂ ಹೆಚ್ಚು ಪ್ರಕರಣಗಳು ಬೆಂಗಳೂರಿನಲ್ಲೇ ದಾಖಲಾಗಿರುವುದು ನಿಜವೇ; ಇಂತಹ ಪ್ರಕರಣಗಳಲ್ಲಿ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಇಂತಹ ಆನ್‌ಲೈನ್ ವಂಚನೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗ್ರತೆ ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ – ಪ್ರತಿಗಳು

**List of Questions for Oral Answers**

**Total No. of Questions - 15**

# LIST - 03

# KARNATAKA LEGISLATIVE COUNCIL

## ONE HUNDRED AND FIFTY THIRD SESSION

## Thursday, the 18th July, 2024

**GROUP - IV**

1. Chief Minister
2. Deputy Chief Minister
3. Minister for Home
4. Minister for Law, Parliamentary Affairs and Legislation and Tourism
5. Minister for Excise
6. Minister for Minor Irrigation, Science and Technology

### ASSET MONETISATION IN ADMINISTRATIVE DEPARTMENTS OF THE STATE GOVERNMENT

**Sri K.A. Thippeswamy (Nominated)-**

31 (413) Will the Chief Minister be pleased to state:-

a) the particulars of five guarantees that have been declared by the State Government in the budget of 2023; and the particulars of departments through which these guarantees are being implemented; (complete details be furnished)

b) the grant has been provided for the implementation of these five guarantees in the budget 2023-24 and 2024-25; and the expenditure occured for the implementation of these guarantees scheme in these year; (year wise and scheme wise complete information be furnished)

c) the grant that has been year earmarked for the developmental works of various departments by the Government in budget 2023-24 and 2024-25; and the grant that has been released for the developmental works of various departments in these years and the amount spent for the same;( department wise and year wise complete information be furnished)

d) whether it is true that the measures has been taken to prepare the comprehensive assets list of administrative departments and the corporation, authority and boards which are coming under these departments and to withdraw the capital investment and to monitising and reutilasation of these assets of the State Government in view of states exchequer is in the duldurims due to the implementation of five guarantees in the State;

e) if so, the amount of asset monitisation; the particulars of the department or agencies that have been prescribed by the State Government to chalk out the capital withdrawal plan; the particular of basis and criteria on which the same have been appointed; and the particulars of study or evaluations that have been taken by the same till date? (complete information be furnished)

## PROMOTION OF TOURISM IN KODAGU DISTRICT

**Sri Kushalappa M.P. (suja) (Local Authorities Constituency)-**

32 (331) Will the Minister for Law, Parliamentary Affairs and Legislation and Tourism be pleased to state:-

a) the grant that has been released and is outstanding from 2019 to till date to promote the tourism in Kodagu district; the particulars of developmental projects that have been taken up; (talukwise details be furnished)

b) there are enormous opportunities to promote the tourism in the district whether the proposal is before the Government to taken up any new project;

c) whether the Government would come forward to provide the employment opportunities for the livelihood of localities by taking up new projects to promote the tourism in Kodagu district?

## RELEASE OF GRANT FOR ORGANISERS OF KAMBALA

**Sri Prathap Simha Nayak K. (Elected by Legislative Assembly)-**

33 (337) Will the Chief Minister be pleased to state:-

a) whether it has come to the notice of the Government that the hardship is being faced by the organisers of Kambala which is the famous folk sport of Tulunadu and they are awaiting for the grant which is not yet released completely;

b) if so, the amount of grant that has been released to organisers of Kambala during the financial year 2023-24;

c) the reason for not releasing the complete grant to organisers of Kambala so far;

d) the timelimit within which the complete and required grant would be released by the Government for organisers of Kambala?

## REGARDING HIKE OF PETROL AND DIESEL PRICE

**Sri U.B. Venkatesh (Nominated)-**

34 (289) Will the Chief Minister be pleased to state:-

a) the details of the years in which the price on petrol and diesel has been hiked during the previous Government; (details be furnished)

b) the differences between the prices of petrol and diesel in other states and in our state;

c) whether the hiking price on petrol and diesel at present, would be caused for the growth of income of the State?

## DELAY IN RECRUITMENT PROCESS OF KARNATAKA PUBLIC SERVICE COMMISSION

**Sri C.T. Ravi (Elected by Legislative Assembly)-**

35 (295) Will the Chief Minister be pleased to state:-

a) the number of notifications that have been published by the Karnataka Public Service Commission to fill up the posts that are lying vacant in various departments; (notification wise particulars of posts along with the date of publication of the notification be furnished)

b) whether the interview has been carried out by conducting written examination by completing the receiving procedure of application for the proposed post in the notification; the details of posts for which the interview has been pending by completing written examination and the written examination not yet conducted be furnished;

c) whether it has come to the notice of the Government that the complaints have been received with regard to the recruitment process being not conducted rapidly in K.P.S.C; the measures taken by the Government to complete the recruitment process rapidly;

d) whether it has come to the notice of the Government that selection list is missing in the office of K.P.S.C; (details be furnished)

e) whether the complaint has been lodged with regard to missing of file; whether the Government has contemplated regarding the future of the selected candidates due to the missing of file; the action taken by the Government in this regard?

## CONSTRUCTION OF NAVALI BALANCING RESERVOIR

**Sri Y.M. Satish (Local Authorities Constituency)-**

36 (326) Will the Deputy Chief Minister be pleased to state:-

a) whether the D.P.R has been prepared for the construction of Navali, balancing reservoir; if so, the date on which it has been prepared; whether the Government has agreed for the same; (copy be furnished)

b) the grant that has been earmarked for the construction of this reservoir; the date on which the tender process would be commenced for the same; (information be furnished)

c) the extent of land which is submerged for the construction of this Navali balancing reservoir; the amount to be incurred for the same; the quantum of water which is available in this reservoir? (information along with details be furnished)

## REGARDING COLLEGE STUDENTS BECOMING DRUG ADDICT

**Dr.Dhananjaya Sarji (Graduates' Constituency)-**

37 (334) Will the Minister for Home be pleased to state:-

a) whether it has come to the notice of the Government that the college students are becoming drug addicts in the State; the number of cases that have been registered and the number of cases in which offenders have been punished; (complete details be furnished)

b) the manner in which the students are getting the drug substances and the steps taken by the Government to restrict the same;

c) the particulars of programmes which are chalked out by the Government to keep away the students from the drug addiction; (details be furnished)

d) the number of de-addiction rehabilitation centers that are functioning in the State; and the manner in which they are functioning? (complete details be furnished)

## RECOVERY OF TAXES FROM NON FILERS

**Sri S.L. Bhojegowda (Teachers' Constituency)-**

38 (343) Will the Chief Minister be pleased to state:-

a) the total amount of revenue that has been collected by the all enforcement divisions of CTD for the year 2022-2023 and 2023-24 (up to June 30);

b) the amount of evaded tax which is detected and collected by the mobilizing of tax; and the amount with regard to monthly returns (GSTR- 3B) filed by the distributors;

c) the action taken by the enforcement officers against the local goods and services tax officers of the concerned jurisdiction for the collection of tax (GSTR- 3B) by non filers;

d) the action that has been taken by the enforcement officers against the officers of concerned jurisdiction in the tax mobilizing cases by the non- filers?

## 3RD PHASE PROCESS OF UPPER KRISHNA PROJECT

**Sri Nirani Hanamant Rudrappa (Graduates' Constituency)-**

39 (351) Will the Deputy Chief Minister be pleased to state:-

a) the present stage of 3rd phase of land acquisition process (FRL-524.256) under upper krishna project; the extent of area which is included for the land acquisition; the amount of land compensation has been provided per acre of land to land losser from whom the land has been acquired already; the total extent of land compensation and the amount to be provided for the same; the timelimit within which the outstanding land compensation would be provided for land losser; (complete information be furnished)

b) whether it is true that the land acquisition process of 3rd phase of land acquisition process is being carriedout by bifurcating into 2 divisions i.e., from 519.60 to 522 M and 522 to 524.256 M, if so, if there is any order by the Government regarding to land acquisition in 2nd phase, the complete information alongwith the copy thereof be furnished;

c) since the land is being acquired in phase by phase, whether it is cause the hardship for distressed farmers and additional delay for the land acquisition process; the stand of the Government in this regard; (details be furnished)

d) whether it has come to the notice of the Government that the demand of the distressed farmers of that region is that land acquisition and compensation should be made at a time; if so, the measures taken by the Government in this regard? (details be furnished)

## REGARDING CONSTRUCTION OF PARKS

**Sri Manje Gowda C.N (Local Authorities Constituency)-**

40 (368) Will the Deputy Chief Minister be pleased to state:-

a) whether it is true that the environmental pollution has been increased due to increase of public vehicles and other reasons in Bengaluru;

b) if so, the Governments which have ruled from the last 75 years have failed to construct the large parks in four direction of the city in the same model of Lal Bagh and Cubbon Park of british era, whether it is also the reason for environment pollution;

c) whether it is true that the then Chief Minister of coalition Government has planned to construct the large parks in all four directions of Bengaluru and reduce the envoirnmental pollution and also formulated the project which was intended to provide clean air to crores

of people who are living in the out-skirts of the city; (complete information be furnished)

d) instead of merely forming new layout and focusing only for the collection of amount the particulars of measures which are under taken to construct large parks immediately in all four directions of Bengaluru?

## LICENSE TO LIQUOR SHOPS

**Sri M.L. Anil Kumar (Local Authorities Constituency)-**

41 (340) Will the Minister for Excise be pleased to state:-

a) the number of types liquor shops for which the license is being issued in the State; if all documents are correct as per the departmental guidelines and documents which are essential for the sanctioning the time required by the Government for issuance of the licence; (detailed information be furnished)

b) the number of CL-2, CL-9 and CL-7 licenses that have been sanctioned by the Government till 2021in the State; (year wise, district wise complete information be furnished)

c) the number of CL-2 and CL-9 licenses that have been sanctioned by the Government from 2021 till date in the State; (year wise, district wise complete information be furnished)

d) the number of CL-7 licenses that have been sanctioned by the Government from 2021 till date in the State; (year wise, district wise complete information be furnished)

e) whether it has come to the notice of the Government that the corruption is being taken place with regard to issue of license to these liquor shops; if so, the stringent action taken against the persons who are involving in the corruption? (complete information be furnished)

## PENDENCY OF CASES IN THE COURT

**Smt. Bharathi Shetty (Nominated)-**

42 (338) Will the Minister for Law, Parliamentary Affairs and Legislation and Tourism be pleased to state:-

a) the particulars of various types of cases are pending to be disposed of in the courts during the last three years in the State; (details of statistics be furnished)

b) the particulars of various types of cases that have been disposed of by the said courts; (the statistics are available with regard to these cases be furnished)

c) the timelimit within which the said cases would be disposed of; the prevailing impediments to frame the required laws; the steps taken by the Government to rectify the same? (details be furnished)

## MODERNISATION OF WORKS OF K.R.S GATES

**Sri Madhu G. Madegowda (Graduates' Constituency)-**

43 (344) Will the Deputy Chief Minister be pleased to state:-

a) the total number of gates that have been installed to Krishnarajasagar reservoir (dam) of Mandya district; the number of gates that have been installed as per the various feet of water level;

b) whether modernisation work of gates has been carried out after construction of reservoir; or whether it has confined only for repair of the works; (complete details be furnished)

c) the stability period of the gates that have been installed for reservoir; the total number of gates for which intended to be modernise; the number of gates that have been modernised in various year so far; and financial expenditure has been borne for the same; (complete details be furnished)

d) the number of gates are yet to be modernised; the required grant for the same; the quantum of water leakage that would be prevented from the modernisation of gates;

e) the present stage of modernisation work of reservoir gates; the reasons for the delay of the work;

f) the number of gates that have been closed due to technical reasons; the particulars thereof; and the year from which that have been closed? (details be furnished)

## IMPLEMENTATION OF 7TH PAY COMMISSION

**Sri S.V. Sankanur (Graduates' Constituency)-**

**Sri Shashil G.Namoshi (Teachers' Constituency)-**

**Sri Nirani Hanamant Rudrappa (Graduates' Constituency)-**

**Sri Sunil Vallyapur (Elected by Legislative Assembly)-**

**Sri Prathap Simha Nayak K. (Elected by Legislative Assembly)-**

44 (356+357+294+409+277) Will the Chief Minister be pleased to state:-

a) the date/year on which the pay commission has been formed by the Government with regard to providing 7th revised pay scales for State Government employees and the time period that has been fixed to submit the report; (information be furnished)

b) whether it has come to the notice of the Government that if the 7th pay commission report exactly the same is not implementing along with another two demands by this last week of July, the resolution has been taken by State Government employees' association for commencement of the non co-operation movement through not attending for work from the month of August;

c) the manner in which the decision has been taken by the Government to implement the recommendations

of 7th pay commission and remaining two demands like restoration of O.P.S by cancelling N.P.S and implementation of the health scheme for the family of employees; (detailed information be furnished)

d) the number of times in which the time period of commission has been extended which is in the report submission stage to the Government; the amount required for the same; the date on which the report of pay commission would be implemented; the date on which of the financial facility would be provided for employees? (complete information be furnished)

## INCREASING ONLINE FRAUD CASES IN THE STATE

**Smt. Umashree (Nominated)-**

45 (404) Will the Minister for Home be pleased to state:-

a) the number of fraudulent cases that have been occurred in the name of foreign companies including online job, fake loan app during the last five years in the State; the number of cases on which the legal action has been taken against the culprits by disposed of till date;

b) whether it is true that more than 73% percent cases have been lodged only in Bengaluru in the online fraud cases that have been lodged across the country; the measures taken by the Government to prevent such cases;

c) the steps taken by the Government to create the awareness among the public with regard to such online fraudulences?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD-238 - 400 Copies